Reg No. B G 155 29-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮಾಲಾಪುರ ಜಿಲ್ಲಾ ರದ್ದುಗೊಳಿಸಿ = ಅದು ದೇಶಕೆ ಅಪಾಯ

ಭಾರತದ ಕ್ರಿಕೆಟ್ ಆಟಗಾರನಿಗೆ

ಮಾಂಚಿಸ್ಟರ್— ಭಾರತದ ಟೆಸ್ಟ್ ಕ್ರಿಕೆಟ್ ಆಟಗಾರ ಫರೂಕ್ ಎಂಜಿನಿಯರಿಗೆ, ಶನಿವಾರ ಮಿಡಲ್‌ಸೆಕ್ಸ್ ವಿರುದ್ಧ ಲ್ಯಾಂಕಷೈರ್ ಪರ ಬ್ಯಾಟ್ ಮಾಡುತ್ತಿತ್ತಾಗ ಚಂಡು ಮುಖಕ್ಕೆ ಬಡಿದು ಆಸ್ಪತ್ರೆಗೆ ಸಾಗಿಸಲ್ಪಟ್ಟರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆನೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಅಮೇರಿಕಾ ಅಧ್ಯಕ್ಷರ ಆಗಮನ

ನವದೆಹಲಿ— ಅಮೇರಿಕಾ ಅಧ್ಯಕ್ಷ ಮಾನ್ಯ ನಿಕ್ಸನ್ನರು ಗುರುವಾರ ಆಗಮಿಸುವರು – ರಾಜಘಾಟಿಗೆ ಭೇಟಿ ಕೊಟ್ಟು ಗಾಂಧೀಜೀ ಸಮಾಧಿಗೆ ಹೂಗುಚ್ಛ ಅರ್ಪಿಸುವರು – ಹಂಗಾಮಿ ರಾಷ್ಟ್ರಾಧ್ಯಕ್ಷರನ್ನ ಭೇಟಿ ಮಾಡುವರು – ಪ್ರಧಾನಿಯವರೊಡನೆ ಅಂತರಾಷ್ಟ್ರ ಪರಿಸ್ಥಿತಿ ಮುಂತಾದ್ದರ ಬಗ್ಗೆ ಮಾತನಾಡುವರು – ಸಂಜೆ ಔತಣ ನಡೆಯುವುದು.

★

ಇಷೂರೆನ್ಸ್

ನವದೆಹಲಿ— ಇಷೂರೆನ್ಸ್ ಪ್ರೀಮಿಯಂಗಳ ಆದಾಯ 1966 ರಲ್ಲಿ ರೂ. 46.91 ಕೋಟಿ ಇದ್ದದ್ದು 1967 ರಲ್ಲಿ 56.44 ಕೋಟಿಗೆ ಹೆಚ್ಚಿದೆ.

★

ಧನುಷ್ಕೋಡಿ ಸಮುದ್ರ ಸೇತುವೆ

ಧನುಷ್ಕೋಡಿ— ರೂ 17 ಲಕ್ಷದ ಧನುಷ್ಕೋಡಿ ಸೇತುವೆ ಇನ್ನೆರಡು ವಾರಗಳಲ್ಲಿ ಸಿದ್ಧವಾಗುವುದು.

★

ಚಂದ್ರನಿಂದ ತಂದದ್ದು

ಹೌಸ್ಟನ್— ಚಂದ್ರನಿಂದ ತರಲಾದ ಮಾದರಿಗಳ ಪ್ರಥಮ ಪೆಟ್ಟಿಗೆಯನ್ನು ವಿಜ್ಞಾನಿಗಳು ತೆರೆದರು.

★

ವರ್ತಕರಿಗೆ ಶಿಕ್ಷೆ

ಬೆಂಗಳೂರು— ಸೀಮೇಎಣ್ಣೆ, ಬೇಬಿ ಫುಡ್, ಅಗತ್ಯ ಪದಾರ್ಥಗಳನ್ನು ಮಾರುವ ಬೆಂಗಳೂರಿನ 4 ವರ್ತಕರೂ, ಬೆಳಗಾವಿನ 4 ವರ್ತಕರೂ ಈ ಸಂಬಂಧದ ಆಜ್ಞಾಬುಲ್ಲಂಘಿಸಿದ ಆಪಾದನೆಗೆ ರೂ 10 ರಿಂದ 200 ರವರೆಗೆ ಬುಲ್ಲಂಕೆ ವಿಧಿಸಲಾಗಿದೆ.

ಮಾಲಾಪುರ ದರುದ್ಧ ಚಳವಳಿ

ಕೊಚ್ಚಿ— ಮಾಲಾಪುರ ವಿರುದ್ಧ ಚಳವಳಿಯಲ್ಲಿ ಎರ್ನಾಕುಲಂನಿಂದ ವಿವಿಧ ಸ್ಥಳಗಳಿಗೆ ಹೋಗುವ ಬಸ್ಸುಗಳ ಓಡಾಟ ಭಾನುವಾರ ಎರಡು ಗಂಟೆ ತಡವಾಯಿತು. ಮಾಲಾಪುರ ವಿರುದ್ಧದ ಜನಸಂಘದ ಚಳವಳಿಗಾರರು ಬಸ್ ನಿಲ್ದಾಣದ ಹತ್ತಿರ ನಿಂತು, ಪ್ರತಿ ಬಸ್ಸನ್ನು ನಿಲ್ಲಿಸಿ, ಆ ದಕ್ಕೆ ' ಮಾಲಾಪುರ ಜಿಲ್ಲೆ ರದ್ದುಪಡಿಸಿ, ಮಾಲಾಪುರ ಜಿಲ್ಲೆ ದೇಶಕ್ಕೆ ಅಪಾಯಕಾರಿ " ಎಂಬ ಭಿತ್ತಿಪತ್ರಗಳನ್ನು ಅಂಟಿಸಿ ಮುಂದೆ ಹೋಗಲು ಬಿಡುತ್ತಿರುವರು.

★

ನಿಕ್ಸನ್ ಗಾಲ್ಫ್ ಬಾಲ್

ಜಕರ್ತ— ತಮ್ಮ ಪ್ರವಾಸದಲ್ಲಿ ಅಮೆರಿಕಾ ಅಧ್ಯಕ್ಷ ನಿಕ್ಸನ್ನರು " ಅಧ್ಯಕ್ಷ ನಿಕ್ಸನ್ ಗಾಲ್ಫ್ ಚಂಡನ್ನು ' ಏಷ್ಯಾ ನಾಯಕರಿಗೆ ಕೊಡುವ ವಿಶೇಷ ಪಾರಿತೋಷಕ.

●

ಬೃಂದಾವನ

ಮೈಸೂರು— ಇಲ್ಲಿಗೆ 12 ಮೈಲಿ ದೂರದಲ್ಲಿರುವ ಪ್ರಖ್ಯಾತ ಬೃಂದಾವನ ತೋಟಗಳನ್ನು ಮೈಸೂರು ಸರಹದ್ದಿಗೆ ಸೇರಿಸಿಕೊಳ್ಳುವ ವಿಷಯ ಪರಿಶೀಲನೆಯಲ್ಲಿದೆಯೆಂದು ಪೌರಸಭಾಧ್ಯಕ್ಷ ಶ್ರೀ ತಿಮ್ಮಯ್ಯನವರು ಹೇಳಿರುವರು.

★

ಒಂದಾಗುವ ನಿರ್ಧಾರ

ನವದೆಹಲಿ— ಪಾಕಿಸ್ತಾನದಲ್ಲಿ ನಿರಂಕುಶ, ಸರ್ವಾಧಿಕಾರಿ ಪ್ರಭುತ್ವದೆದುರು ಸೋರಾನಲ್ಲಿ ನಡೆನಾಡು ಗಾಂಧಿಯವರ ಕೆಂಪು ಪಟ್ಟೆ ಸಂಸ್ಥೆಯು ಷೇಕ್ ರಹಮಾನರ ಅನಾಮಿ ಲೀಗಿನೊಡನೆ ಸೇರ್ಪಡೆಯಾಗಲು ನಿರ್ಧರಿಸಿದೆ.

ನವೀನ ವಧಾಗೃಹ

ಮೈಸೂರು— ಮಾಧವಪುರ ರಸ್ತೆಯಲ್ಲಿ ರೂ 1 ಲಕ್ಷ ಖರ್ಚಿನಲ್ಲಿ ನವೀನ ವಧಾಗೃಹ ಕಟ್ಟಲು ಯೋಚಿಸಲಾಗಿದೆಯೆಂದು ಪೌರಸಭಾಧ್ಯಕ್ಷ ಶ್ರೀ ತಿಮ್ಮಯ್ಯನವರು ಹೇಳಿರುವರು.

ಹೆಂಡದ ಅಂಗಡಿ

ಮಂಗಳೂರು— ಹಿಂದಿನ ಕಂಟ್ರಾಕ್ಟರುಗಳು ಜುಲೈ 1 ರಿಂದ ಹೆಂಡದಂಗಡಿಗಳನ್ನು ತೆರೆಯಲು ವಿಫಲರಾದ್ದರಿಂದ, ದಕ್ಷಿಣ ಕನ್ನಡಾದ ಹೆಂಡದರಗಡಿಗಳನ್ನು ತಾ || 31 ರಂದು ಪುನಃ ಹರಾಜು ಹಾಕಲಾಗುವದೆಂದು ಜಿಲ್ಲಾಧಿಕಾರಿಗಳು ಹೇಳಿದರು.

ಕೇಂದ್ರದ ನೆರವಿಗೆ

ಬೆಂಗಳೂರು— ರಾಜ್ಯದಲ್ಲಿನ ಅನಾವೃಷ್ಟಿ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ರಾಜ್ಯ ಸರಕಾರ ಕೇಂದ್ರದಿಂದ ರೂ. 9 ಕೋಟಿ ಸಹಾಯ ಕೇಳಿದೆ, ಕಡೇಪಕ್ಷ ರೂ 1 ಕೋಟಿಯಾದರೂ ಸಿಕ್ಕಬಹುದು, ಎಂದು ಕಂದಾಯ ಮಂತ್ರಿ ಶ್ರೀ ಕೌಜಲ್ಗಿ ಹೇಳಿದರು.

ಕುದುರೆ ಲಾಯದ ಅಗ್ನಿ ಅನಾಹುತ

ಬೆಂಗಳೂರು— ಅರಮನೆ ಕುದುರೆಲಾಯದಲ್ಲಿನ ಅಗ್ನಿ ಅನಾಹುತ ಸಂಬಂಧದಲ್ಲಿ 28 ಕುದುರೆಚಾಕರಿಯವರನ್ನು ಪ್ರಶ್ನಿಸಲಾಗಿದೆ – ಪೋಲೀಸರು ಇನ್ನೂ ತನಿಖೆ ನಡೆಸುತ್ತಿದಾರೆ - ದಸ್ತಗಿರಿಗಳೇನೂ ಆಗಿಲ್ಲ

★

ಹೈದರಾಬಾದು— ಆಗಸ್ಟ್ 1 ರಿಂದ ರಿಂದ ತೆಲಂಗಾಣಾ ಸಾಮೂಹಿಕ ಚಳವಳಿ ಜೋಡಿನಗರಗಳು ಮತ್ತು ಜಿಲ್ಲೆಗಳಲ್ಲಿ ನಡೆಸಲು ಪ್ರಜಾಸಮಿತಿ ನಿರ್ಧರಿಸಿದೆ.

ಬಿಜಾಪುರ— ಅಧಿಕಾರ ಸ್ವೀಕಾರಾನಂತರ ಇಲ್ಲಿಗೆ ಪ್ರಪ್ರಥಮವಾಗಿ ಬರುವ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರನ್ನು ಸ್ವಾಗತಿಸುವದಕ್ಕಾಗಿ ಒಂದು ಸಮಿತಿ ರಚಿಸಲಾಗಿದೆ.

ಬೆಂಗಳೂರು— ಕೃಷ್ಣಾ–ಗೋದಾವರಿ ನೀರಿನ ನ್ಯಾಯಾಂಗ ಮಂಡಲಿ ಮುಂದೆ ತಮ್ಮ ಕೇಸ್ ಇಡಲು ಮೈಸೂರು, ಆಂಧ್ರ ಮತ್ತು ಮಹಾರಾಷ್ಟ್ರ ಕಾಲಾವಕಾಶ ಕೇಳಿವೆ.

ತ್ರಿಣಪುರಿ ಕ್ಷೇತ್ರ

(ಅ. ನ. ಅಯ್ಯಂಗಾರ್, ಹೋಗನೂರು)

ಮೈಸೂರಿಗೆ 18 ಮೈಲಿಗಳ ದೂರದಲ್ಲಿ, ಹಾಗೂ ನಂಜನಗೂಡಿಗೆ ಒಂಭತ್ತು ಮೈಲಿಗಳ ದೂರದಲ್ಲಿ ಹುಲ್ಲಹಳ್ಳಿ ಎಂಬ ಗ್ರಾಮವಿದೆ. ಮೈಸೂರಿನಿಂದಲೂ, ನಂಜನ ಕೊಡಿನಿಂದಲೂ, ಹೆಗ್ಗಡದೇವನಕೋಟೆಯಿಂದಲೂ ಇಲ್ಲಿಗೆ ಬಸ್ಸುಗಳು ಬರುತ್ತವೆ. ಇದು ಕಪಿಲಾ ನದಿ ತೀರದಲ್ಲಿರುವ ಹಿಂದೆ ಕಣ್ವ ಮಹರ್ಷಿಗಳ ಆಶ್ರಮವಿದ್ದ ತ್ರಿಣ ಪುರಿ ಕ್ಷೇತ್ರವೆಂದು ಪ್ರಸಿದ್ಧವಾಗಿದ್ದ ಪುಣ್ಯಕ್ಷೇತ್ರವಾಗಿರುತ್ತೆ. ಈ ಕ್ಷೇತ್ರದಲ್ಲಿ ಶ್ರೀ ವರದರಾಜಸ್ವಾಮಿ, ಶ್ರೀ ಶ್ರೀನಿವಾಸಸ್ವಾಮಿ, ಶ್ರೀ ಚೆನ್ನಮಲ್ಲೇಶ್ವರಸ್ವಾಮಿ ಶ್ರೀ ಆಂಜನೇಯಸ್ವಾಮಿ ದೇವಾಲಯಗಳಿವೆ. ಶ್ರೀ ವರದರಾಜಸ್ವಾಮಿ ದೇವಾಲಯವು ಮೂರು ಆವರಣಗಳಿಂದ ಕೂಡಿದ ವಿಶಾಲವಾದ ಹಾಗೂ ಅದ್ಭುತ ಕಲಾ ಕೃತಿಗಳಿಂದ ಕೂಡಿದ ದೇವಾಲಯವಾಗಿರುತ್ತೆ. ಪ್ರಭಾವಳಿಯಲ್ಲಿ ದಾಶಾವತಾರಗಳಿರುವ ಶ್ರೀ ವರದರಾಜಸಾಮಿ, ಶ್ರೀದೇವಿ ಮತ್ತು ಭೂದೇವಿ ಸಮೇತನಾಗಿರುವ ಶ್ರೀ ಯೋಗಾನರಸಿಂಹ, ಕಾಳಿಂಗಮರ್ಧನ ಕೃಷ್ಣ, ಬೆಣ್ಣೆ ಕೃಷ್ಣ, ವೇಣುಗೋಪಾಲ, ಸೀತಾಲಕ್ಷ್ಮಣ ಸಮೇತನಾಗಿರುವ ಶ್ರೀರಾಮ, ಈ ಮೂರ್ತಿಗಳನ್ನು ಎಷ್ಟು ಹೊತ್ತು ನೋಡಿದರೂ ತೃಪ್ತಿಯಾಗುವುದಿಲ್ಲ. ಇವಲ್ಲದೇ ಈ ದೇವಾಲಯದಲ್ಲಿರುವ ವಿಕ್ಷಸ್ಸೇನ ನಮ್ಮಾಳ್ವರ್, ರಾಮಾನುಜಾಚಾರ್ಯರು, ವೇದಾಂತದೇಶಿಕರು, ಅಣ್ಣನವರು ಮುಂತಾದ ವಿಗ್ರಹಗೂ ಅತ್ಯೋಕ್ತಿ ಕಲಾಕೃತಿಗಳಾಗಿವೆ.

ಈ ದೇವಾಲಯವು ಮುಜರಾಯ್ ಇಲಾಖೆಗೆ ಸೇರಿರುತ್ತೆ. ಆದರೆ ದೇವಾಲಯದ ಭದ್ರತೆಗೆ ಹಾಗೂ ಉಳಿಯುವಿಕೆಗೆ ಸರ್ಕಾರವು ಅಷ್ಟಾಗಿ ಗಮನಕೊಟ್ಟಂತೆ ತೋರಲಿಲ್ಲ. ಅನೇಕ ಸನ್ನಿಧಿಗಳಿಗೆ ಬಾಗಲುಗಳಿಲ್ಲ. ಇರುವ ಬಾಗಲುಗಳಿಗೂ ಹಾಕಲು ಬೀಗಗಳಿರುವುದಿಲ್ಲ. ದೇವಾಲಯವು ಶಿಥಿಲವಾಗಿ ಮಳೆಗಾಲದಲ್ಲಿ ಎಲ್ಲಾ ಕಡೆಯೂ ನೀರು ಸೋರುತ್ತದೆ. ಮೇಲ್ಛಾವಣಿಯ ಕಲ್ಲುಗಳು ಕೆಲವು ಕಡೆ ಬಿದ್ದುಹೋಗಿವೆ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ದೇವಾಲಯವು ನಿರ್ನಾಮಕೇಷಪಾಗಬಹುದೆಂಬ ಭೀತಿ ಒದಗಿದೆ.

ಮುಜರಾಯಿ ಇಲಾಖಾ ಅಧಿಕಾರಿಗಳೂ, ಧಾರ್ಮಿಕರಾದ ಧನಿಕರೂ ಕೂಡಲೆ ಸೂಕ್ತ ಗಮನ ನೀಡಿ ರಾಷ್ಟ್ರದ ಅಮೂಲ್ಯ ಆಸ್ತಿಯನ್ನು ಉಳಿಸಲು ಪ್ರಯತ್ನಿಸಬೇಕೆಂದು ಪ್ರಾರ್ಥಿಸುತ್ತೇನೆ.



Protect the Cow

ಗೋರಕ್ಷಣೆಗೆ ಹೆಂಜರ ಪೀಡ

SHAKTI

SUDHA

A Superb Tonic

ವುಡ್‌ಲ್ಯಾಂಡ್ಸ್ 25-7-69 ದಿಂದ ಅನೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆಲೆನ್

ರಹೆಮಾನ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— ಅನೋಘ 3 ನೇ ವಾರ

ಅನೋಘ ಆಕರ್ಷಣೀಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ತ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ

ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M.B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4